

ಕೆಲವೊಮ್ಮೆ ಪ್ರವಾಸವೆಂದರೆ, ಚರಿತ್ರೆಯಲ್ಲಿ ನಡೆದ ಘಟನಾವಳಿಗಳಿಗೆ ಮರುಭೇಟಿ ನೀಡುವುದೇ ಆಗಿರುತ್ತದೆ. ಅದು ಸಂತಸ ತರುವ, ದುಃಖ ಮೂಡಿಸುವ, ಮುಜುಗರಪಡಿಸುವ, ಮೈ ಜುಮ್ಮೆನ್ನಿಸುವ ಯಾವುದೇ ಸ್ಥಳವಾಗಿರಬಹುದು. ಆ ಮೂಲಕ ನಮ್ಮ ಬದುಕುಗಳನ್ನು ಫ್ರೇಮುಗಳಲ್ಲಿಟ್ಟು ನೋಡಿಕೊಂಡು 'ಬದುಕೇ ನೀನದೆಷ್ಟು ಸುಂದರ' ಎಂತಲೋ, 'ನೀನೆಂತಹ ಕ್ರೂರ ಅಂತಲೋ' ಮನವರಿಕೆ ಮಾಡಿಕೊಳ್ಳುವುದು ನಡೆಯುತ್ತದೆ. ಇಂತಹ ಪ್ರವಾಸಿ ಸ್ಥಳಗಳು ಪ್ರಪಂಚದಾದ್ಯಂತ ಇವೆ.

ಸರ್ಬಿಯಾ ದೇಶದ 'ನಿಸ್' ಎನ್ನುವ ಜಾಗದಲ್ಲಿ, ಹೆಸರು ಕೇಳಿದರೆ ಮೈ ಜುಮ್ಮೆನ್ನಿಸುವ, ಕುತೂಹಲ ಮೂಡಿಸುವ, ಚರಿತ್ರೆಯ ತುಣುಕೊಂದನ್ನು ತಲೆಬುರುಡೆಗಳಲ್ಲಿ ಹಿಡಿದಿಟ್ಟಿರುವ ಜಾಗವೊಂದಿದೆ. ಅದರ ಹೆಸರು 'ಸ್ಕಲ್ ಟವರ್'. ಈ ತಲೆಬುರುಡೆಯ ಬುರುಜಿನ ಹೆಸರು ಕೇಳುತ್ತಲೆ ನಮ್ಮ ಕಣ್ಣಮುಂದೆ 'ಇಂಡಿಯಾನಾ ಜೋನ್ಸ್'ನ ಸಿನಿಮಾಗಳು, ಕಿಂಗ್–ಕಾಂಗ್ ಸಿನಿಮಾದ ಸ್ಕಲ್ ಐಲೆಂಡ್‌ಗಳು ಇತ್ಯಾದಿ ರೋಚಕ ದೃಶ್ಯಗಳು ತೆರೆದುಕೊಂಡವು. ಆದರೆ ಅಲ್ಲಿ ನಮಗೆ ಕಂಡಿದ್ದೇ ಬೇರೆ.

ಸರ್ಬಿಯಾ ದೇಶದ ಹೆಸರು ಜಗತ್ಪ್ರಸಿದ್ಧ ಟೆನಿಸ್ ತಾರೆ ನೊವಾಕ್ ಜೊಕೊವಿಕ್ ಕಾರಣವಾಗಿ ಬಹುತೇಕರಿಗೆ ಗೊತ್ತಿದೆ. ಆದರೆ, ಈ ದೇಶಕ್ಕೆ ಚರಿತ್ರೆಯಲ್ಲಿ ಇನ್ನೂ ಹಲವು ರೀತಿಯ ಉಲ್ಲೇಖಗಳು ದೊರೆಯುತ್ತವೆ. ಬಾಲ್ಕನ್ ದೇಶಗಳಲ್ಲಿ (ಆಲ್ಬೇನಿಯಾ, ಬೋಸ್ನಿಯಾ ಮತ್ತು ಹರ್ಜೆಗೋವಿನ, ಬಲ್ಗೇರಿಯಾ, ಕ್ರೊಯೇಷಿಯಾ, ಕೊಸೊವೊ, ಮಾಂಟೆನಿಗ್ರೊ, ಮಸೆಡೋನಿಯಾ, ರೊಮೇನಿಯಾ, ಸರ್ಬಿಯಾ ಮತ್ತು ಸ್ಲೊವೇನಿಯಾ ಪ್ರದೇಶಗಳ ಪರ್ಯಾಯ ದ್ವೀಪಖಂಡ) ಉತ್ತಮ ಗುರುತಿದೆ. ಇದು ಪೂರ್ವ ಯೂರೋಪಿನ ಪೂರ್ವಾಂಚಿನಲ್ಲಿ ಬರುತ್ತದೆ. ಈ ಬಾಲ್ಕನ್ ದೇಶಗಳು ಕೂಡ ಹಿಟ್ಲರಿನ ಕ್ರೌರ್ಯಕ್ಕೆ ಬಲಿಯಾದಂಥವು. ಅದಕ್ಕೂ ಹಿಂದೆ, ಒಟ್ಟೊಮಾನ್ ಚಕ್ರಾಧಿಪತ್ಯದ ಕ್ರೌರ್ಯಕ್ಕೆ ಒಳಗಾದ ದೇಶಗಳಿವು. ಖಳರ ಅಟ್ಟಹಾಸದ ನಡುವೆಯೂ ಹೀರೊಗಳು ಉದಿಸುತ್ತಾರೆ ಎನ್ನುವುದಕ್ಕೆ ಚರಿತ್ರೆಯಲ್ಲಿ ಹಲವು ನಿದರ್ಶನಗಳಿವೆ. ಸರ್ಬಿಯಾ ಕೂಡ ಇದರಲ್ಲೊಂದು.

ಪುಟ್ಟ ದೇಶವಾದರೂ ಸರ್ಬಿಯನ್ನರು ಶೌರ್ಯ ಮತ್ತು ಸಾಹಸಗಳಿಗೆ ಹೆಸರಾದವರು. ಅತ್ಯಂತ ಭೀಕರ ಚಳಿ, ಹಲವಾರು ಯುದ್ಧ, ಕಲಹಗಳ ನಡುವೆ ಸರ್ಬಿಯನ್ನರು ತಮ್ಮ ಅಸ್ಮಿತೆ ರೂಪಿಸಿಕೊಂಡದ್ದೇ ಅವರ ಸಾಹಸ ಗುಣಗಳಿಂದ.

ಈ ಸ್ಕಲ್ ಟವರಿಗೆ ಸಂಬಂಧಿಸಿದಂತೆ ರೋಚಕ ಕಥೆಯೊಂದಿದೆ.

ಒಟ್ಟೊಮಾನ್ ದೊರೆಗಳು ಸರ್ಬಿಯಾ ದೇಶದ ಮೇಲೆ ತಮ್ಮ ಆಧಿಪತ್ಯ ಹೇರಿರುತ್ತಾರೆ. ಆದರೆ ಅದನ್ನು ಒಪ್ಪದ ಸರ್ಬಿಯನ್ನರು ಗುಪ್ತವಾಗಿ ಸಂಘಟಿತರಾಗಿ ಅವರನ್ನು ತಮ್ಮ ದೇಶದಿಂದ ಹೊಡೆದೋಡಿಸಲು ಸಂಚು ಮಾಡುತ್ತಾರೆ. ಸಣ್ಣ ಸಂಖ್ಯೆಯಲ್ಲಿದ್ದರೂ ಏಕಾಏಕಿ ಒಟ್ಟೊಮಾನರ ವಿರುದ್ಧ ದಂಗೆಯೇಳುತ್ತಾರೆ. ಒಟ್ಟು 16000 ಸರ್ಬಿಯನ್ನರು



ದಂಗೆಯ ನಾಯಕ ಸ್ಟೆವಾನ್ ಸಿಂಡಲಿಕ್‌ನದು ಎನ್ನಲಾಗಿರುವ ತಲೆಬುರುಡೆ

ಜೊತೆಗೂಡುತ್ತಾರೆ. ಇಂತಹ ಮೂರು ಸಾವಿರದಷ್ಟು ಕ್ರಾಂತಿಕಾರಿ ಸರ್ಬಿಯನ್ನರನ್ನು 'ಸ್ಟೆವಾನ್ ಸಿಂಡಲಿಕ್' ಎನ್ನುವವನು ಮುನ್ನಡೆಸುತ್ತಾನೆ.

ಅವರ ನಡುವೆ ಯುದ್ಧವೇ ನಡೆಯುತ್ತದೆ. ಆದರೆ ಉತ್ತಮ ಸಂಘಟನೆ ಮತ್ತು ಸಂವಹನದ ಕೊರತೆ ಕಾರಣ ಸರ್ಬಿಯನ್ನರು ಹಿಮ್ಮೆಟ್ಟಬೇಕಾಗುತ್ತದೆ. ಸರ್ಬಿಯನ್ನರನ್ನು ಅಟ್ಟಿಸಿಕೊಂಡು ಹೋಗುವ ಒಟ್ಟೊಮಾನ್ ಸೈನಿಕರು ಅವರನ್ನು ಸೆಗಾರ್ ಹಿಲ್ ಎನ್ನುವ ಜಾಗದಲ್ಲಿ ಸುತ್ತುವರೆಯುತ್ತಾರೆ. ಕೊಮೆನಿಕ ಎನ್ನುವ ಹಳ್ಳಿಯ ಬಳಿ ನಡೆವ ಈ ಯುದ್ಧದಲ್ಲಿ ಒಟ್ಟೊಮಾನರ ಕೈ ಮೇಲಾಗುತ್ತದೆ. ಆಗೇನಾದರೂ ಒಟ್ಟೊಮಾನರ ಕೈಗೆ ಸೆರೆಯಾಳುಗಳಾಗಿ ಸಿಕ್ಕರೆ, ತಮ್ಮನ್ನು ಅರೆಜೀವವಾಗಿಟ್ಟು ಅತ್ಯಂತ ಕ್ರೂರ ರೀತಿ ಚಿತ್ರಹಿಂಸೆಗೊಳಪಡಿಸಿ ಕೊಲ್ಲುತ್ತಾರೆಂಬ ಭೀತಿ ಸರ್ಬಿಯನ್ನರನ್ನು ಕಾಡುತ್ತದೆ.

ಆಗ ಸರ್ಬಿಯನ್ನರ ನಾಯಕ ಸ್ಟೆವಾನ್, ತಾನು ನಿಂತಿದ್ದ ಕಂದಕದಲ್ಲಿದ್ದ ಸ್ಫೋಟಕಗಳಿಗೆ ಗುಂಡು ಹಾರಿಸಿ ಇತರೆ ಯೋಧರ ಜೊತೆ ತಾನೂ ಸಾಯುತ್ತಾನೆ. ಅದರೊಡನೆ ಅವರನ್ನು ಸುತ್ತುವರೆದಿದ್ದ ಒಟ್ಟೊಮಾನ್ ಸೈನಿಕರನ್ನೂ ಸಾಯಿಸಿ ಆತ್ಮಾಹುತಿ ದಾಳಿ ನಡೆಸುತ್ತಾನೆ. ಸಾವಿರಾರು ಸೈನಿಕರು ವೀರ ಮರಣವನ್ನಪ್ಪುತ್ತಾರೆ. ಈ ಯುದ್ಧದಲ್ಲಿ ಒಟ್ಟಾರೆ 4000 ಸರ್ಬಿಯನ್ನರು, 10000 ಟರ್ಕರು ಸತ್ತರು ಎನ್ನಲಾಗಿದೆ. ಈ ಘಟನೆಯನ್ನು ಅರಿತ ಇತರೆ ಸರ್ಬಿಯನ್ನರ ರಕ್ತ ಕುದ್ದು ಒಟ್ಟೊಮಾನರ ವಿರುದ್ಧ ಕ್ರುದ್ಧರಾಗುತ್ತಾರೆ.

ಈ ಸ್ಮಾರಕದ ಘೋರ ಹೆಸರೇ ಸೂಚಿಸುವಂತೆ ಸೋತ ಸರ್ಬಿಯನ್ನರಿಗಾಗಿ ಅವರ ಶತ್ರುರಾಜ್ಯ ಒಟ್ಟೊಮಾನ್ ಆಧಿಪತ್ಯ ನಿರ್ಮಿಸಿರುವ ಬುರುಜಿದು.

31 ಮೇ, 1809ರಲ್ಲಿ ನಡೆದ ಈ ಯುದ್ಧದಿಂದ ಪ್ರೇರಿತರಾಗಿ ಇತರೆ ಸರ್ಬಿಯನ್ನರು ತಮ್ಮ ಮೇಲೆ ದಂಗೆಯೇಳಬಹುದೆನ್ನುವ ಸುಳಿವು ಒಟ್ಟೊಮಾನರಿಗೆ ಸಿಗುತ್ತದೆ. ದಂಗೆಗಳಾಗದಂತೆ ತಡೆಯೊಡ್ಡಲು, ಮಾನಸಿಕವಾಗಿ ತಮ್ಮ ಶತ್ರುಗಳನ್ನು ಹೆದರಿಸುವ



ಸ್ಕಲ್ ಟವರ್‌ನ ಗೋಡೆಗಳಲ್ಲಿ ದಂತಕತೆಯಾಗಿರುವ ವೀರಯೋಧರ ತಲೆಬುರುಡೆಗಳು